ಜನಪ್ರಿಯವಾಯಿತು. ಈಗ ಅದನ್ನು ಅಜಯ್ ಚಕ್ರವರ್ತಿ ಕಛೇರಿಯಲ್ಲಿ ಹಾಡಿದರೆ, 'ಅಯ್ಯೋ ಇವರು ಚಿತ್ರಗೀತೆ ಹಾಡುತ್ತಿದ್ದಾರೆ' ಎಂದು ಜನ ಅಂದುಕೊಳ್ಳುತ್ತಾರಂತೆ! ಬಹಳಷ್ಟು ಜನಕ್ಕೆ 'ಭಾಗ್ಯದ ಲಕ್ಷ್ಮಿ ಬಾರಮ್ಮ' ಎಂಬ ಹಾಡು ಚಿತ್ರಗೀತೆಯ ಕೆಟಗರಿಯದ್ದೋ, ಭಕ್ತಿಗೀತೆಯದ್ದೋ ಎಂದು ಗೊಂದಲವಾಗಿದೆ ! ಕುನ್ನಕ್ಕುಡಿ, ಕದ್ರಿ ಗೋಪಾಲನಾಥ ತಮ್ಮ ವಾದ್ಯಗಳಲ್ಲಿ ಚಿತ್ರಗೀತೆಗಳನ್ನೂ ನುಡಿಸಿದರು. ಲೆಗ್ ಸ್ಪಿನ್ನರ್ ಬಿ.ಎಸ್. ಚಂದ್ರಶೇಖರರ ಮುಖೇಶ್ ಹಾಡುಗಳ ಕುರಿತ ಪ್ರೀತಿ ಅನೇಕ ಕಡೆ ಪ್ರಸ್ತಾಪವಾಗಿದೆ. ಈಗ ರಿಯಾಲಿಟಿ ಶೋಗಳಿಗಾಗಿಯೇ ಹುಟ್ಟಿದವರಂತೆ ಚಿಕ್ಕ ಮಕ್ಕಳು ಚಿತ್ರಗೀತೆಗಳ ಜೊತೆ ತಮ್ಮ ಬಾಲ್ಯವನ್ನು ನೆಂಚಿಕೊಳ್ಳುತ್ತಿದ್ದಾರೆ.

'ಸಂಗೀತ ಚಿಕಿತ್ಸೆ' ಎಂದು ಯಾವು ಯಾವುದೋ ರಾಗ ಕೇಳಿಸಿ ವೈದ್ಯರು ಪ್ರಯತ್ನ ಪಡುತ್ತಿರುವುದು ಶ್ಲಾಘನೀಯವಾದರೂ 'ಚಿತ್ರಗೀತೆ ಚಿಕಿತ್ಸೆ' ಮಾಡಿದರೆ ಫಲಿತಾಂಶ ಬೇಗ ಬರಬಹುದು ಎಂದು ನನ್ನ ತಿಳಿವಳಿಕೆ. ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಮಾನವ ಶಾಸ್ತ್ರೀಯ, ಮನೋವೈದ್ಯಕೀಯ ಅಧ್ಯಯನಗಳಲ್ಲಿ ಚಿತ್ರಗೀತೆಗಳನ್ನು ಸೇರಿಸಿಕೊಳ್ಳಬಹುದೇನೋ, ಎಂದು ನನಗೆ ಅನಿಸಿದೆ. ಮಾನವ ಶಾಸ್ತ್ರ ಮತ್ತು ಮಾನವ ಸಂಗೀತಶಾಸ್ತ್ರವೆಂಬ ಹೊಸಬಗೆಯ ತೌಲನಿಕ ಅಧ್ಯಯನವೊಂದು ಹಿಂದಿ ಚಿತ್ರಗೀತೆಗಳ ಜಗತ್ತಿಗೆ ಸಂಬಂಧಪಟ್ಟಂತೆ ನಡೆದಿದೆ. ಕನ್ನಡ ಇಂಥದ್ದರಿಂದ ಮಾರು ದೂರವಿದೆ. ಹಿಂದಿಯ ಹದಿನಾಲ್ಕು ಸಾವಿರ ಹಾಡುಗಳಲ್ಲಿ ಇರುವ ರಾಗಗಳನ್ನು ಹುಡುಕುವ ಅಧ್ಯಯನವೊಂದು ಅನೇಕ ಸಂಪುಟಗಳಲ್ಲಿ ಪ್ರಕಟವಾಗಿದೆ. 'ಯಮನ್' ರಾಗ ಆಧರಿಸಿಯೇ 174 ಹಾಡುಗಳು ಬಂದಿವೆಯಂತೆ. ಹೀಗೆ ಹೇಳುತ್ತ ಹೋದರೆ ಕೊನೆ ಮೊದಲಿಲ್ಲ. ಚಿತ್ರಗೀತೆಗಳ ಬಗ್ಗೆ ಅರಿಯಬೇಕಾದುದು ಬಹಳವಿದೆ. ತಮ್ಮನ್ನು ಕಾಡಿದ ಚಿತ್ರಗೀತೆಯೊಂದರ ಬಗ್ಗೆ ಎರಡೆರಡು ಪುಟ ಬರೆದು ಕೊಡಿ ಎಂದು ದೇಶದ ಜನತೆಯನ್ನು ಕೇಳಿದರೆ ಅವರ 'ಮನ್ ಕೀ ಬಾತ್, ಹೃದಯ್ ಕೀ ಬಾತ್' ನೂರು ಕೋಟಿ ಪುಟಗಳನ್ನು ದಾಟಿ ಪುಸ್ತಕ ಮಾಲಿಕೆಗಳನ್ನು ತರಬೇಕಾದೀತೇನೋ. ಅಲ್ಲಾ, ಇದೊಂದು ರೀತಿ ಆಧುನಿಕ ಪುರಾಣವೇ ಸೃಷ್ಟಿಯಾದಂತೆ ಆಗಬಹುದೇ? ಇದನ್ನು ಕೇಳಿದೊಡನೆ ಹೌದು ಹೌದು ಇದಕ್ಕೂ ಒಂದು ಅಕಾಡೆಮಿಯಾಗಬೇಕು, ಅನುದಾನ ಬೇಕು, ನಾನು ಅಧ್ಯಕ್ಷನಾಗಬೇಕು ಎಂದು ಯಾರಾದರೂ ಕೂಗು ಹಾಕುವ ಮೊದಲೇ ಇಲ್ಲಿಗೇ ನಿಲ್ಲಿಸುವುದು ಒಳ್ಳೆಯದು. ಅದಾಗ್ಯೂ ಒಂದು ವೇಳೆ ಈ ಪ್ರಬಂಧ ಅದಕ್ಕೆ ಕಾರಣವಾಗುವುದಾದಲ್ಲಿ ಅದರ ಕ್ರೆಡಿಟ್ ನನ್ನದಿರುತ್ತದೆ ಎಂದು ನಾನು ಹೇಳಲೇಬೇಕಾಗಿಲ್ಲ ಅಲ್ಲವೇ ?

## ಜಿ.ಕೆ. ರವೀಂದ್ರಕುಮಾರ್

ಕವಿ, ವಿಮರ್ಶಕ ರವೀಂದ್ರಕುಮಾರ್ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯವರು. 'ಸಿಕಾಡ', 'ಪ್ಯಾಂಜಿಯಾ', 'ಕದವಿಲ್ಲದ ಊರಿನಲ್ಲಿ', 'ಒಂದು ನೂಲಿನ ಜಾಡು', 'ಮರವನಪ್ಪಿದ ಬಳ್ಳಿ' ಅವರ ಕವನ ಸಂಗ್ರಹಗಳು. ಭದ್ರಾವತಿ ಆಕಾಶವಾಣಿ ಕೇಂದ್ರದ ಸಹಾಯಕ ಕಾರ್ಯಕ್ರಮ ನಿರ್ದೇಶಕರಾಗಿರುವ ಅವರು 'ಸುಪ್ತಸ್ವರ', 'ಪುನರ್ಭವ' ಮುಂತಾದ ಗದ್ಯ ಕೃತಿಗಳನ್ನೂ ಪ್ರಕಟಿಸಿದ್ದಾರೆ.